


ಬೇಕಾಗುತ್ತಿತ್ತು. ಅಕಸ್ಮಾತ್ ತಗಲಿದರೂ ಸಾಕು, ದೊಡ್ಡ ರಾದ್ಧಾಂತ, ಬೇರೆ ಮಡಿಸೀರೆ ಉಟ್ಟೇ ಕೆಲಸದ ಮುಂದುವರಿಕೆ. ತೀರಾ ಸಣ್ಣ ಮಕ್ಕಳಿದ್ದರೆ ಅವುಗಳ ಅಂಗಿ ಪಂಗಿ ಬಿಚ್ಚಿಸಿ, ಹುಟ್ಟುಡುಗೇಲಿ ಎತ್ತಿಕೊಳ್ಳಬಹುದಿತ್ತೇ ಹೊರತು, ಸ-ವಸ್ತ್ರ ನಿಷೇಧ ಜಾರಿಯಲ್ಲಿರ್ತಾ ಇತ್ತು. ಅದಕ್ಕೆ ನಾನಿದನ್ನು ಆಚಾರ ಎನ್ನೋಕ್ಕಿಂತ ಅವಾಂತರ ಅಂದಿದ್ದು. ಈ ಮಡಿಯ ಅಡಾವುಡಿ ಎಲ್ಲಿಂದ ಬಂತೋ ಗೊತ್ತಿಲ್ಲ. ವೇದಗಳಲ್ಲಾಗಲಿ, ಸಾಮಾಜಿಕ ಬದುಕಿನ ಆಚಾರಸಂಹಿತೆಯಂತಿರುವ ಸ್ಮೃತಿಗ್ರಂಥಗಳಲ್ಲಾಗಲಿ, ಪುರಾಣಗಳಲ್ಲಾಗಲಿ, ಕಾವ್ಯಗಳಲ್ಲಾಗಲಿ ಕಾಣದ ಮಡಿಹುಡಿ ಎಲ್ಲಿಂದ ನುಸುಳಿ ಬಂದಿದೆಯೋ ಗೊತ್ತಿಲ್ಲ. ಸ್ಮೃತಿಗಳು ಶುಚಿತ್ವ, ಅಂದರೆ ಹೈಜಿನ್‌ಗೆ ಹೆಚ್ಚು ಒತ್ತು ಕೊಟ್ಟಂತೆ ತೋರುವ ಅನೇಕ ಶ್ಲೋಕಗಳನ್ನು ಹೇಳಿವೆ. ಈ ಮಡಿಯ, ಮಡಿಕೋಲಿನ ವಿಷಯ ಎಲ್ಲೂ ಇಲ್ಲ.

ಈಗಲೂ ಮಡಿ ಎಲ್ಲಿದೆ? ಇನ್ನು ಮಡಿಕೋಲಿನ ಮಾತಂತೂ ಬಿಡಿ, “ಅಡಿಯೇ ಅನ್ನೋಕೆ ಹೆಂಡತಿನೇ ಇಲ್ಲ, ಮಗನ ಹೆಸರು ವೆಂಕಟರಮಣ” – ಅಂದಹಾಗೆ ಮಡಿಯಿದ್ದರಲ್ಲವೇ ಮಡಿಕೋಲು? ಅವೆಲ್ಲಾ ಮಡಿಕೋಲಿನಂತೆಯೇ ಮೂಲೆ ಸೇರಿಬಿಟ್ಟಿದೆ ಅಂತಾ ಅನ್ನಬೇಡಿ. ಹಾಗೆ ಪೂರ್ತಿ ಸಾರಾ ಸಗಟಾಗಿ ತಳ್ಳಿಹಾಕಕ್ಕಾಗಲ್ಲ. ನಮ್ಮ ಸಂಸ್ಕೃತದ ಪ್ರಾಧ್ಯಾಪಕರೊಬ್ಬರು, ಈ ಬೆಂಗಳೂರಿನಲ್ಲೂ ತಮ್ಮ ಮಡಿಗೆ ಬೇಕೇ ಬೇಕು ಅಂತಾ ಬಾವಿ ಇರೋ ಮನೇನೆ ಹುಡುಕಿ ಬಾಡಿಗೆಗೆ ಹೋದದ್ದು, ಅಂತಹ ಬಾಡಿಗೆ ಮನೆ ಸಿಕ್ಕ ಮೇಲೆಯೇ ಮದುವೆಯಾಗಿ ಗೃಹಸ್ಥಾಶ್ರಮ ಪ್ರವೇಶಿಸಿ, ಸಾಂಗವಾಗಿ ಮಡಿ ಆಚಾರಗಳನ್ನು ಇಟ್ಟುಕೊಂಡಿರೋದನ್ನು ನೋಡಿದಾಗ, ಇನ್ನೂ ಕೆಲವರಾದರೂ ಈ ಪದ್ಧತಿಯ